**ಸಾಕ್ಷಿಗೆ ದಿನಾಂಕಃ 19.11.2025 ರಂದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಕೆ.ಎಸ್.ಎಸ್. ವಕೀಲರಿಂದಃ</u>**

ನನಗೆ ಸಾಕ್ಷಿಯು ನುಡಿಯಲು ನ್ಯಾಯಾಲಯದಿಂದ ನೋಟಿಸು ಬಂದಿರುವುದಿಲ್ಲ. ಸಾಕ್ಷಿ ನುಡಿಯಲು ನನಗೆ ವಾದಿಯು ಕೇಳಿಕೊಂಡಿರುತ್ತಾರೆ. ವಾದಿಯು ಈ ದಾವೆಯನ್ನು ವಿಭಾಗ ಕೇಳಿ ಸರ್ವೆ ನಂ.354/1 ಮತ್ತು 354/2 ನ್ನು ಸಲ್ಲಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯ ಕುಟುಂಬದವರ ಪರಿಚಯ ನನಗೆ ಗೊತ್ತು. ಮಲ್ಲಪ್ಪನವರಿಗೆ 2 ಗಂಡು ಮತ್ತು ಒಬ್ಬ ಹೆಣ್ಣು ಮಗಳು. ಹೆಣ್ಣುಮಗಳು ಪ್ರಭಾಮಣಿ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಮಲ್ಲಪ್ಪನವರು ಬದುಕಿದ್ದಾಗ ದೊಡ್ಡನಹುಂಡಿ ಗ್ರಾಮದಲ್ಲಿ ವಾಸವಿದ್ದರು. ಪ್ರತಿವಾದಿಯು ದೊಡ್ಡನಹುಂಡಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ತಾಯಿ ಬಸಮ್ಮಣ್ಣಿ ಜೀವಂತ ಇರುತ್ತಾರೆ ಎಂದರೆ ಸರಿ. ಅವರು ಪ್ರತಿವಾದಿಯ ಜೊತೆ ವಾಸವಿರುತ್ತಾರೆ ಎಂದರೆ ಸರಿ. ವಾದಿಯು ಈ ದಾವೆಯನ್ನು ಸುರೇಶ್ ರವರ ವಿರುದ್ಧ ಸಲ್ಲಿಸಿರುತ್ತಾರೆ. ಮಲ್ಲಪ್ಪನವರ ಅಂತ್ಯಕ್ರಿಯೆಯನ್ನು ದೊಡ್ಡನಹುಂಡಿ ಗ್ರಾಮದಲ್ಲಿ ವಾದಿ ಮತ್ತು ಪ್ರತಿವಾದಿ ಮಾಡಿರುತ್ತಾರೆ. ಮಲ್ಲಪ್ಪನವರು ನಿ.ಪಿ.6 ರಲ್ಲಿ ನಮೂದು ಮಾಡಿರುವ ಸ್ವತ್ತುಗಳು ಕ್ರಯಕ್ಕೆ ಪಡೆದಿದ್ದರು. ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ ಅದರ ದಿನಾಂಕ ನನಗೆ ಗೊತ್ತಿರುವುದಿಲ್ಲ. ಮೇಲೆ ಹೇಳಿದ ಎರಡು ಸ್ವತ್ತುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ. ಮಲ್ಲಪ್ಪನವರ ಭಾಗಕ್ಕೆ ಬಂದ ಸ್ವತ್ತುಗಳನ್ನು ಒಟ್ಟಾಗಿ 8 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರು. 2007 ರ ನಂತರ 8 ವರ್ಷಗಳ ಕಾಲ ಸಾಗುವಳಿ ಮಾಡುತ್ತಿದ್ದರು. ಮಲ್ಲಪ್ಪ ಸಾಯುವವರೆಗೆ ಒಟ್ಟಾಗಿ ಇದ್ದರು. ಮಲ್ಲಪ್ಪ ಸಾಯುವಾಗ ಬೇರೆ ಆಗಿರಲಿಲ್ಲ. ಈ ಸಂಬಂಧ ಅವರ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ. ಪಂಚಾಯಿತಿ ಪಾರಿಕತ್ತಿಗೆ ಹೊರತು ಪಡಿಸಿ ಬೇರೆ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಪಂಚಾಯಿತಿ ಪಾರಿಕತ್ತಿನಲ್ಲಿ ನಮೂದು ಮಾಡಿರುವ ಸರ್ವೆ ನಂಬರ್ ಗಳು ನನಗೆ ಗೊತ್ತಿರುವುದಿಲ್ಲ. ಪಂಚಾಯಿತಿ ಪಾರಿಕತ್ತಿನಲ್ಲಿ ತಂದೆಗೆ ಒಟ್ಟು ಆಸ್ತಿಯಲ್ಲಿ ಅರ್ಧ ಭಾಗ ಮತ್ತು ಉಳಿದ ಅರ್ಧ ಭಾಗಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಎಂದು ನಮೂದು ಇರುತ್ತದೆ. ಸದರಿ ಪತ್ರದಲ್ಲಿ ಹೆಂಡತಿ ಮತ್ತು ಮಗಳಿಗೆ ವಿಭಾಗ ನೀಡಿರುವುದಿಲ್ಲ.

ನನ್ನನ್ನು ವಿಭಾಗವನ್ನು ಮಾಡಿಕೊಡಲು ವಾದಿಯು ಕರೆದಿರುತ್ತಾರೆ. ವಿಭಾಗ ಪತ್ರವು 2007 ಜೂನ್ ತಿಂಗಳಿನಲ್ಲಿ ಆಗಿರುತ್ತದೆ. ದಿನ ನನಗೆ ನೆನಪಿಲ್ಲ. ವಿಭಾಗ ಪತ್ರವನ್ನು ತಾಲ್ಲೂಕು

ಕಛೇರಿಯಲ್ಲಿ ಮಾಡಿರುತ್ತಾರೆ. ತಾಲ್ಲೂಕು ಕಛೇರಿಯಲ್ಲಿ ವಿಭಾಗದ ಸಂಬಂಧ ಮಾತುಕತೆಯು ಬೆಳಿಗ್ಗೆ 10.00 ಗಂಟೆಯಿಂದ 12.00 ಗಂಟೆಯವರೆಗೆ ಮಾಡಿರುತ್ತೇವೆ. ವಿಭಾಗ ಪತ್ರವನ್ನು ಯಾರು , ಎಲ್ಲಿ ಬರೆಸಿರುತ್ತಾರೆ ಎಂದು ಹೇಳಲು ನನಗೆ ಬರುವುದಿಲ್ಲ. ವಿಭಾಗ ಪತ್ರದಲ್ಲಿ ಬರೆದಿರುವ ಒಕ್ಕಣೆ ನನಗೆ ಗೊತ್ತಿರುವುದಿಲ್ಲ. ಈ ಸಂಬಂಧ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಛಾಪಾ ಕಾಗದವನ್ನು ಯಾರು ತಂದರು ಎಂದು ನನಗೆ ಗೊತ್ತಿರುವುದಿಲ್ಲ. ವಿಭಾಗ ಪತ್ರಕ್ಕೆ ನಾನು ಮತ್ತು ಮತ್ತೊಬ್ಬ ಸಾಕ್ಷಿದಾರರಾದ ಗುರುಸ್ವಾಮಿ ಹಾಗೂ ಈ ದಾವೆಯ ಪಕ್ಷಗಾರರು ಮತ್ತು ಅವರ ತಂದೆ ಸಹಿ ಮಾಡಿರುತ್ತಾರೆ. ಸಹಿಯನ್ನು ತಾಲ್ಲೂಕು ಕಛೇರಿಯಲ್ಲಿ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರವನ್ನು ಹೇಳಲು ಬರುವುದಿಲ್ಲ. ಸಹಿಯನ್ನು ಹೊರತುಪಡಿಸಿ ಉಳಿದ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಮಲ್ಲಪ್ಪನವರು ಪಂಚಾಯಿತಿ ಪಾರಿಕತ್ತನ್ನು ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಸಹಿಯನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿರುವುದಿಲ್ಲ. ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.6 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**